ಹೂಡಲು ನಮ್ಮ ಕಾರ್ಯದರ್ಶಿಯವರು ಮತ್ತು ಕಾನೂನು ಇಲಾಖೆಯ ಕಾರ್ಯದರ್ಶಿಯವರು ಯೋಚನೆ ಮಾಡಿದ ಮೇಲೆ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲಾಗುತ್ತದೆ. ಜಿಲ್ಲಾ ಬ್ಯಾಂಕುಗಳ ಮ್ಯಾನೇಜರ್, ಲ್ಯಾಂಡ್ ವ್ಯಾಲುಯೇಷನ್ ಆಫೀಸರ್, ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಫ್ ಕೋ ಆಪರೇಟಿವ್ ಸೊಸೈಟೀಸ್, ಡೆಪ್ಯುಟಿ ರಿಜಿಸ್ಟ್ರಾರ್ ಆಫ್ ಕೋ-ಆಪರೇಟಿವ್ ಸೊಸೈಟೀಸ್ ಇವೆರೆಲ್ಲಾ ಯಾವರೀತಿ ಇನ್‌ವಾಲ್ವ್ ಆಗಿದ್ದಾರೆ ಅವರು ಎಷ್ಟೆಷ್ಟು ಜವಾಬ್ದಾರರು ಎಂಬುದನ್ನು ನಿಗದಿಪಡಿಸಿಕೊಂಡು ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ಮಾನ್ಯ ಸದಸ್ಯರಾದ ಯಡಿಯೂರಪ್ಪನವರಿಗೆ ನಾನು ಭರವಸೆಯನ್ನು ಕೊಡುತ್ತಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಬ್ಯಾಂಕುಗಳಲ್ಲಿ ಏನು ದುರುಪಯೋಗ ನಡೆಯುತ್ತಿದೆ ಅದನ್ನು ನಿಲ್ಲಿಸುವಂತೆ ನಿಮ್ಮ ಅಧಿಕಾರಿಗಳಿಗೆ ತಿಳಿಸಿ, ನೀವು ಕ್ರಮ ತೆಗೆದುಕೊಳ್ಳದಿದ್ದರೆ ಇಲ್ಲಿ ನಡೆಯತಕ್ಕ ಬ್ರಷ್ಟಾಚಾರ ನಿಲ್ಲುವುದಿಲ್ಲ. ಕಲ್ಪನೆ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ ; ಅಷ್ಟೊಂದು ಅನ್ಯಾಯ ಪಿ. ಎಲ್. ಡಿ. ಬ್ಯಾಂಕುಗಳಲ್ಲಿ ನಡೆಯುತ್ತಿದೆ.

ಶ್ರೀ ಆರ್. ಎಲ್. ಜಾಲಪ್ಪ.—ಇದರ ಬಗ್ಗೆ ಸೂಕ್ತಕ್ರಮ ತೆಗೆದುಕೊಳ್ಳುತ್ತೇನೆ.

ವಿಷಯ :—ಆದಿ ಉಡುಪಿಯಲ್ಲಿರುವ ಉಪ ಮಾರುಕಟ್ಟೆಯ ಮಳಿಗೆ.

ಪ್ರಶ್ನೆ ಸಂಖ್ಯೆ 89 (440) ಶ್ರೀಮತಿ ಮನೋರಮ ಮಧ್ವರಾಜ್ (ಉಡುಪಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಸಹಕಾರ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

(ಅ) ಉಡುಪಿ ತಾಲ್ಲೂಕಿನಲ್ಲಿಯ ಆದಿ-ಉಡುಪಿಯಲ್ಲಿ ನಿರ್ಮಿಸಲಾದ ಉಪ ಮಾರುಕಟ್ಟೆ ಪ್ರಾಂಗಣವನ್ನು ಇನ್ನುವರೆಗೂ ಪ್ರಾರಂಭಿಸಲಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

(ಆ) ಹಾಗಿದ್ದಲ್ಲಿ ಅದನ್ನು ಏಂದಿಗೆ ಪ್ರಾರಂಭಿಸಲಾಗುವುದು ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

(ಅ) ಬಂದಿದೆ.

(ಆ) ಮಾರುಕಟ್ಟೆ ಸಮಿತಿಯ ಕಟ್ಟಡವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಬಗ್ಗೆ ವಿವಾದವಿದೆ. ಕಟ್ಟಡವನ್ನು ಸ್ವಾಧೀನಕ್ಕೆ ಪಡೆದ ಕೂಡಲೇ ಸಗಟು ವ್ಯಾಪಾರವನ್ನು ನೂತನ ಮಾರುಕಟ್ಟೆ ಪ್ರಾಂಗಣಕ್ಕೆ ವರ್ಗಾವಣೆ ಮಾಡಲು ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಆರ್. ಎಲ್. ಜಾಲಪ್ಪ,—ಈಗಾಗಲೇ ಹಳೆಯ ಮಾರ್ಕೆಟ್‌ನ್ನು ಶಿಫ್ಟ್ ಮಾಡಲಿಕ್ಕೆ ಗೆಜೆಟ್ ನೋಟಿಫಿಕೇಷನ್ ಆಗಿದೆ. ಸ್ವಲ್ಪ ಲ್ಯಾಪ್ಸ್ ಆಗಿದೆ, ಮೊದಲೇ ಮಾಡಬೇಕಾಗಿತ್ತು. ಕಂಟ್ರಾಕ್ಟರ್ ಕೋರ್ಟ್‌ಗೆ ಹೋಗಿದ್ದರಿಂದ ವ್ಯವಹಾರ ಸಡಿಲವಾಗಲಿಲ್ಲವೆಂದು ನಾನು ಉಡುಪಿಗೆ ಹೋಗಿದ್ದಾಗ ಹೇಳಿದರು. ಈಗಾಗಲೇ ಅದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ. ಸೆಪ್ಟೆಂಬರ್ ತಿಂಗಳಿನಲ್ಲಿ ಈ ಮಾರ್ಕೆಟ್‌ನ್ನು ಶಿಫ್ಟ್ ಮಾಡುತ್ತೇವೆ.

ವಿಷಯ : ಬೆಂಗಳೂರು ಜಿಲ್ಲೆಯಲ್ಲಿ ಅಭಾವಕ್ಕೆ ತುತ್ತಾಗಿರುವ ಪ್ರದೇಶಗಳು,

ಪ್ರ. ಸಂಖ್ಯೆ 90 (422) ಶ್ರೀ ಪಿ. ಸಿ. ಮುನಿಸ್ವಾಮಯ್ಯ (ದೇವನಹಳ್ಳಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಕಂದಾಯ ಹಾಗೂ ಯೋಜನಾ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಜಿಲ್ಲೆಯ ಅನೇಕ ತಾಲ್ಲೂಕುಗಳನ್ನು 1984-85ನೇ ಸಾಲಿಗೆ ಅಭಾವ ಪೀಡಿತ ಪ್ರದೇಶಗಳೆಂದು ಘೋಷಿಸಲಾಗಿದೆಯೇ ;

ಆ) ಹಾಗಿದ್ದಲ್ಲಿ ತೀವ್ರ ಅಭಾವಕ್ಕೆ ತುತ್ತಾಗಿರುವ ದೇವನಹಳ್ಳಿ ತಾಲ್ಲೂಕನ್ನು ಅಭಾವ ಪೀಡಿತ ಪ್ರದೇಶವೆಂದು ಘೋಷಿಸದಿರಲು ಕಾರಣವೇನು ?

ಶ್ರೀ ಎಸ್. ಆರ್, ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಸಚಿವರು).—

ಅ) ಜಿಲ್ಲೆಯ ಎಲ್ಲಾ 11 ತಾಲ್ಲೂಕುಗಳನ್ನು ಅಭಾವ ಪೀಡಿತ ತಾಲ್ಲೂಕುಗಳೆಂದು ಗುರುತಿಸಲಾಗಿದೆ.

ಆ) ದೇವನಹಳ್ಳಿ ತಾಲ್ಲೂಕನ್ನು ಸಹ 1984ನೇ ಸಾಲಿನಲ್ಲಿ ಅಭಾವ ಕ್ಕಾಮಕ್ಕೆ ಒಳಗಾದ ತಾಲ್ಲೂಕು ಎಂದು ಗುರುತಿಸಲಾಗಿದೆ, ಹೀಗಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಪಿ. ಸಿ. ಮುನಿಸ್ವಾಮಯ್ಯ.—ಮಾನ್ಯ ಮಂತ್ರಿಗಳ ಉತ್ತರದಲ್ಲಿ 1984ನೇ ಇಸವಿಯಲ್ಲಿ ಅಭಾವಪೀಡಿತ ಪ್ರದೇಶವೆಂದು ಘೋಷಣೆ ಮಾಡಿದ್ದೇವೆಂದು ಹೇಳಿದ್ದಾರೆ, ಈ ವರ್ಷ ಮಳೆಯಾಗಿಲ್ಲ,

ಉಳುಮೆ ಮಾಡಿಲ್ಲ, ನಿನ್ನೆ ತಾನೇ ಮಳೆ ಬಂದಿದೆ. 1985ನೇ ಸಾಲಿನಲ್ಲೂ ಸಹ ಅಭಾವ ಪೀಡಿತ ಪ್ರದೇಶವೆಂದು ಘೋಷಣೆ ಮಾಡಬೇಕು. ಕಾಮಗಾರಿ ಕೆಲಸ ಕಾರ್ಯಗಳಿಗಾಗಿ ಹೆಚ್ಚಿಗೆ ಹಣವನ್ನು ಬಿಡುಗಡೆ ಮಾಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವರ್ಷ ಸಹ ಹಣ ಬಿಡುಗಡೆ ಮಾಡಿದ್ದೇವೆ. ಅವಶ್ಯಕತೆ ಇದ್ದರೆ ಹೆಚ್ಚು ಹಣ ಬಿಡುಗಡೆ ಮಾಡುತ್ತೇನೆ.

ವಿಷಯ : ಹೊಸದುರ್ಗ ತಾಲ್ಲೂಕಿನ ಗೋಮಾಳ ಜಮೀನಿನಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವುದು,

ಪ್ರ. ಸಂಖ್ಯೆ 91 (373) ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಕಂದಾಯ ಹಾಗೂ ಯೋಜನಾ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಹೊಸದುರ್ಗ ತಾಲ್ಲೂಕಿನಲ್ಲಿ ಕಂದಾಯ ಇಲಾಖೆಗೆ ಸೇರಿದ ಜಮೀನು ಇದೆಯೇ ; ಹಾಗಿದ್ದಲ್ಲಿ ಅದರ ವಿಸ್ತೀರ್ಣವೆಷ್ಟು ;

ಆ) 1983-84 ಮತ್ತು 1984-85ನೇ ಸಾಲುಗಳಲ್ಲಿ ಸದರಿ ತಾಲ್ಲೂಕಿನಲ್ಲಿ ಯಾರಿಗಾದರೂ ಭೂಮಿ ಮಂಜೂರಾತಿ ಮಾಡಲಾಗಿದೆಯೆ ;

ಇ) ಹಳ್ಳಿಗಳಲ್ಲಿ ಇರುವ ಗೋಮಾಳ ಜಮೀನನ್ನು ಕಾಯ್ದಿರಿಸಬೇಕೆಂದು ನೀತಿ ನಿಯಮಗಳು ಇದೆಯೆ ;

ಈ) ಹಾಗಿದ್ದಲ್ಲಿ ಹೊಸದುರ್ಗ ತಾಲ್ಲೂಕಿನಲ್ಲಿ ಎಷ್ಟು ಗೋಮಾಳ ಜಮೀನನ್ನು ಕಾದಿರಿಸಿದೆ ;

ಉ) ಹೊಸದುರ್ಗ ತಾಲ್ಲೂಕಿನ ಗೋಮಾಳ ಜಮೀನುಗಳಲ್ಲಿ ಬಗರ್ ಹುಕುಂ ಸಾಗುವಳಿ ಮಾಡಲಾಗುತ್ತಿದೆಯೆ ;

ಊ) ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಭೂ ರಹಿತ ಬಡ ರೈತರಿಂದ ಜಮೀನು ಮಂಜೂರಾತಿಗಾಗಿ ಅರ್ಜಿಗಳು ಬಂದಿವೆಯೇ ;

ಋ) ಹಾಗಿದ್ದಲ್ಲಿ 1983-84 ಮತ್ತು 1984-85ನೇ ಸಾಲುಗಳಲ್ಲಿ ಬಂದಿರುವ ದರಖಾಸ್ತು ಅರ್ಜಿಗಳ ಬಗ್ಗೆ ಕ್ರಮ ಕೈಕೊಳ್ಳಲಾಗಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಅ) ಹೊಸದುರ್ಗ ತಾಲ್ಲೂಕಿನಲ್ಲಿ ಕಂದಾಯ ಇಲಾಖೆಗೆ ಸೇರಿದ ಗೋಮಾಳ ಮತ್ತು ಹುಲ್ಲುಬನ್ನಿ ಜಮೀನುಗಳು ಸೇರಿ ಒಟ್ಟು 60079-22 ಎಕರೆ ಇರುತ್ತದೆ.

ಆ) 1983-84ರಲ್ಲಿ ಇಬ್ಬರು ಸೈನಿಕ ವರ್ಗದವರಿಗೆ 20 ಎಕರೆಯನ್ನು ಹಾಗೂ 1984-85ರಲ್ಲಿ 69 ಜನ ಭೂ ರಹಿತರಿಗೆ 183 ಎಕರೆ ಜಮೀನನ್ನು ಮಂಜೂರು ಮಾಡಲಾಗಿದೆ.

ಇ) ಕರ್ನಾಟಕ ಭೂ ಕಂದಾಯ ನಿಯಮ 97ರ ಪ್ರಕಾರ ಪ್ರತಿ ನೂರು ಜಾನುವಾರುಗಳಿಗೆ 12 ಹೆಕ್ಟೇರುಗಳಂತೆ ಮಿಸಲಿಡಬೇಕೆಂದು ನಿಯಮವಿರುತ್ತದೆ.

ಈ) ಸುಮಾರು 50,876-22 ಎಕರೆಯನ್ನು ಕಾದಿರಿಸಲಾಗಿದೆ,

ಉ) ಸುಮಾರು 2,882-28 ಎಕರೆ ಜಮೀನಿನಲ್ಲಿ ಅನಧಿಕೃತ ಸಾಗುವಳಿ ಇದೆ.

ಊ) 1983-84ರಲ್ಲಿ 1045 ಅರ್ಜಿಗಳು ಮತ್ತು 1984-85ರಲ್ಲಿ 496 ಅರ್ಜಿಗಳು ಬಂದಿರುತ್ತವೆ.

ಋ) ಅರ್ಹರಾದ ಅರ್ಜಿದಾರರಿಗೆ ಭೂ ಮಂಜೂರು ಮಾಡಲು ಕರ್ನಾಟಕ ಭೂ ಮಂಜೂರಾತಿ ನಿಯಮ 1969ರ ಪ್ರಕಾರ ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಜಿ. ರಾಮದಾಸ್.—ಮಾನ್ಯ ಸಭಾಧ್ಯಕ್ಷರೆ, ನನ್ನ ಮತ ಕ್ಷೇತ್ರದಲ್ಲಿ ಮದಲು ಎಂಬ ಗ್ರಾಮದ ಹರಿಜನರಿಗೆ 75 ಎಕರೆ ಭೂಮಿ ಮಂಜೂರು ಆಗಿದೆ. ಆ ಭೂಮಿಯ ಸಾಗುವಳಿ ಚೀಟಿ ಇದೆ ಪಹಣಿ ಇದೆ, ಎಲ್ಲಾ ಅವರ ಹೆಸರಿನಲ್ಲಿದೆ. ಆ ಭೂಮಿಯನ್ನು ಬಲಾಡ್ಯರು ಬರೆಸಿಕೊಂಡಿದ್ದಾರೆ. ಸಂಬಂಧಪಟ್ಟ ತಹಶೀಲ್ದಾರರು ಭೂಮಿಯನ್ನು ಬಲಾಡ್ಯರಿಂದ ಬಿಡಿಸಿಕೊಟ್ಟಿಲ್ಲ. ಇದರ ಬಗ್ಗೆ ಸರ್ಕಾರ ಏನು ಕ್ರಮವನ್ನು ತೆಗೆದುಕೊಂಡಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—1983-84ನೇ ಸಾಲಿನಲ್ಲಿ 1045 ಅರ್ಜಿಗಳು ಬಂದಿದ್ದವು. ಅದರಲ್ಲಿ 117 ಅರ್ಜಿಗಳು ಮಂಜೂರಾಗಿವೆ. ಇನ್ನುಳಿದ ಅರ್ಜಿಗಳು ಮಂಜೂರಾಗಿಲ್ಲ, ಅದೇರೀತಿ 1984-85ನೇ ಸಾಲಿನಲ್ಲಿ 496 ಅರ್ಜಿಗಳು ಬಂದಿದ್ದು ಅವುಗಳಲ್ಲಿ 74 ಅರ್ಜಿಗಳು ಮಂಜೂರಾಗಿದ್ದು, ಇನ್ನುಳಿದ ಅರ್ಜಿಗಳು ವಿಚಾರಣೆಯ ಹಂತದಲ್ಲಿವೆ.